ಆಗುತ್ತಿರುತ್ತವೆ. ಮೊಟ್ಟೆಗಳು ಹೋಗುವುದನ್ನು ಕಾನೂನು ಮೂಲಕವೇನೂ ತಡೆಯುವುದು ಸಾಧುವಲ್ಲವೆಂದು ನನ್ನ ಅಭಿಪ್ರಾಯ. ಉದಾಹರಣೆಗೆ ನಮಗೆ ಸಿಮ್ಲಾದಿಂದ ಆಲೂಗಡ್ಡೆ ಬೀಜಗಳು ಒರುತ್ತವೆ. ಅವರು ನಾವು ಕೊಡುವುದಿಲ್ಲ ಎಂದರೆ ಹೇಗೆ ? ಎಲ್ಲಾ ರಾಜ್ಯಗಳಿಂದಲೂ ಇಲ್ಲದ ಕಡೆಗೆ ಬೇಕಾದ ವಸ್ತುಗಳು ಹೋಗ ಬೇಕಾಗುತ್ತದೆ. ಆದುದರಿಂದ ಅವರಿಗೆ ಕೊಡಬಾರದು ಎಂದು ಮಾಡುವುದಕ್ಕಾಗುವುದಿಲ್ಲ. ಆದರೂ ನಮ್ಮ ಬೆಳೆಗಾರರ ಹಿತದೃಷ್ಟಿಯನ್ನು ಪ್ರಾಮುಖ್ಯವಾಗಿ ಗಮನದಲ್ಲಿಟ್ಟುಕೊಂಡು, ಆ ವಿಷಯದ ಬಗ್ಗೆ ಗಮನ ಕೊಡುತ್ತೇನೆ.

## ಉತ್ತರ ಕನ್ನಡ ಜಿಲ್ಲೆಯಲ್ಲಿ ಕೈಗಾರಿಕಾ ಅಭಿವೃದ್ಧಿಯ ಬಗ್ಗೆ

೫೧(ಬಿ) ಶ್ರೀ ಆರ್. ಎನ್. ನಾಯಕ್ (ಭಟ್ಕಳ್).—ಮಾನ್ಯ ಕೈಗಾರಿಕಾ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವರೆ ;

(ಅ) ೧೯೬೩–೬೪ನೇ ಸಾಲಿನಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಸರ್ಕಾರದವರು ಪ್ರಾರಂಭಿಸಿರುವ ಸಣ್ಣ ಉದ್ದಿಮೆಗಳ ಸಂಖ್ಯೆ ಎಷ್ಟು ಮತ್ತು ಖಾಸಗಿ ಸಣ್ಣ ಉದ್ದಿಮೆದಾರರಿಗೆ ಧನ ಸಹಾಯ ನೀಡಲಾಗಿದೆಯೇ ;

(ಆ) ಉತ್ತರ ಕನ್ನಡ ಜಿಲ್ಲೆಯನ್ನು ಉದ್ದಿಮೆಯ ದೃಷ್ಟಿಯಿಂದ ಹಿಂದುಳಿದ ಜಿಲ್ಲೆ ಎಂದು ಪರಿಗಣಿಸಲಾಗಿದೆಯೇ ?

(ಇ) ಹಾಗಿದ್ದಲ್ಲಿ, ಜಿಲ್ಲೆಯನ್ನು ಉದ್ದಿಮೆಯ ದೃಷ್ಟಿಯಿಂದ ಮುಂದುವರೆಸಲು ಕೈಗೊಂಡ ಕ್ರಮಗಳೇನು ?

ಶ್ರೀ ಜೆ. ಹೆಚ್. ಪಟೇಲ್ (ದೊಡ್ಡ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳು).—

(ಅ) (೧) ಸರ್ಕಾರದವರು ಸಣ್ಣ ಕೈಗಾರಿಕಾ ಘಟಕಗಳನ್ನು ಸ್ಥಾಪಿಸಿಲ್ಲ.

(೨) ಕೇಂದ್ರ ಸಹಾಯ ೮ ಘಟಕಗಳಿಗೆ ರೂ. ೨,೦೦,೬೦೦.

(೩) ರಾಜ್ಯ ಸರ್ಕಾರದಿಂದ ೨೭ ಘಟಕಗಳಿಗೆ ಕೊಟ್ಟಿರುವ ಧನ ಸಹಾಯ ರೂ. ೪.೦೩,೭೩೦.

(ಆ) ಹೌದು.

(ಇ) ಜಿಲ್ಲೆಯನ್ನು ಉದ್ದಿಮೆ ದೃಷ್ಟಿಯಲ್ಲಿ ಮುಂದುವರೆಸಲು ಜಿಲ್ಲಾ ಕೈಗಾರಿಕಾ ಕೇಂದ್ರವನ್ನು ಸ್ಥಾಪನೆ ಮಾಡಲಾಗಿದೆ. ಈ ಜಿಲ್ಲಾ ಕೈಗಾರಿಕಾ ಕೇಂದ್ರವು ಜಿಲ್ಲೆಯಲ್ಲಿ ಹೊಸ ಕೈಗಾರಿಕೆಗಳನ್ನು ಪ್ರಾರಂಭಿಸುವ ಉದ್ದಿಮೆಗಳಿಗೆ ವಿವಿಧ ಸಾಲ ಸೌಲಭ್ಯಗಳನ್ನು ಮತ್ತು ಅನುಕೂಲತೆಗಳನ್ನು ಕಲ್ಪಿಸಿಕೊಡಲಾಗುತ್ತಿದೆ.

ಶ್ರೀ ಆರ್. ಎನ್. ನಾಯ್ಕ.—ಮಾನ್ಯ ಅಧ್ಯಕ್ಷರೇ, ತಿಂಗಳಿಗೆ ನೂರು ಚಿಕ್ಕ ಉದ್ದಿಮೆಗಳನ್ನು ಉತ್ತರ ಕನ್ನಡ ಜಿಲ್ಲೆಯಲ್ಲಿ ಸ್ಥಾಪಿಸುವ ಯೋಜನೆಯಿದೆ ಎಂದು ಕಳೆದ ಸಲ ಭರವಸೆ ಕೊಟ್ಟಿದ್ದರು. ಈ ಯೋಜನೆಯ ಅಡಿಯಲ್ಲಿ ನಮ್ಮ ಜಿಲ್ಲೆಯಲ್ಲಿ ಈತನಕ ಚಿಕ್ಕ ಉದ್ದಿಮೆಗಳನ್ನು ಸ್ಥಾಪನೆ ಮಾಡಿದ್ದಾರೋ ಹೇಗೆ ? ಉತ್ತರ ಕನ್ನಡ ಜಿಲ್ಲೆಯನ್ನು ಉದ್ದಿಮೆ ದೃಷ್ಟಿಯಿಂದ ಹಿಂದುಳಿದ ಜಿಲ್ಲೆಯೆಂದು ಯಾವ ವರ್ಷದಿಂದ ಸಾರಲಾಗಿದೆ.

ಶ್ರೀ ಜೆ. ಎಚ್. ಪಟೇಲ್.—೧೯೬೩–೬೪ರಲ್ಲಿ ೧೪೭ ಸಣ್ಣ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿದೆ. ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ವ್ಯಾಪ್ತಿಯೊಳಗೆ ಬರುವಂತಹವುಗಳಿಗೆ ನಾವು ಧನ ಸಹಾಯ ಮಾಡುತ್ತೇವೆ ನಾವು ರಾಜ್ಯದಲ್ಲಿ ನಾಲ್ಕು ಕೈಗಾರಿಕಾ ವಲಯಗಳೆಂದು ಮಾಡಿದ್ದೇವೆ ಒಂದನೇ ವಲಯದಲ್ಲಿ ಬೆಂಗಳೂರು, ಬೆಂಗಳೂರು ನಾರ್ತ್, ಮೈಸೂರು ಬರುತ್ತವೆ. ಎರಡನೇ ವಲಯದಲ್ಲಿ ೯೬ ತಾಲ್ಲೂಕುಗಳಿವೆ. ಅಲ್ಲಿ ನಮ್ಮ ರಾಜ್ಯ ಸರ್ಕಾರದಿಂದ ಶೇಕಡಾ ೧೦ರಷ್ಟು ಸಬ್ಸಿಡಿ ಕೊಡುತ್ತೇವೆ. ಮೂರನೇ ವಲಯದಲ್ಲಿ ೫೬ ತಾಲ್ಲೂಕುಗಳಿವೆ. ಅವುಗಳಿಗೆ ಇನ್ನೂ ಹೆಚ್ಚು. ಅಂದರೆ ಶೇಕಡಾ ೧೫ರಷ್ಟು ರಾಜ್ಯ ಸರ್ಕಾರದ ಧನ ಸಹಾಯ ಮಾಡುತ್ತೇವೆ. ನಾಲ್ಕನೇ ವಲಯದಲ್ಲಿ ೩೭ ತಾಲ್ಲೂಕುಗಳಿವೆ. ಇದರಲ್ಲಿ ಧಾರವಾಡ, ರಾಯಚೂರು ಹೀಗೆ ಅತ್ಯಂತ ಹಿಂದುಳಿದ ಕೈಗಾರಿಕಾ

ಪ್ರದೇಶಗಳಿಗೆ, ಶೇಕಡಾ ೧೫ರಷ್ಟು ಸಬ್ಸಿಡಿ ಕೊಡುತ್ತೇವೆ. ಕಾರವಾರ, ಹಳಿಯಾಳ, ಖಿರ್ಸಿ ಇವುಗಳು ಸಿನೇ ಜೋನ್‌ನಲ್ಲಿ ಬರುತ್ತವೆ. ಇವುಗಳು ರಾಜ್ಯ ಸರ್ಕಾರದ ೧೦-೧೫ ಶೇಕಡಾ ಸಬ್ಸಿಡಿಯ ಆಡಿಯಲ್ಲಿ ಬರುತ್ತವೆ, ಜಿಲ್ಲೆಗೆ ಸಾವಿರ ಉದ್ದಿಮೆಗಳನ್ನು ಸ್ಥಾಪನೆ ಮಾಡುವ ನಮ್ಮ ಗುರಿಯಲ್ಲಿ ಶೇಕಡಾ ೭೫ರಷ್ಟು ಸಾಧನೆಯಾಗಿದೆ.

ಶ್ರೀ ಆರ್. ಎನ್. ನಾಯಕ್.—ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದಲ್ಲಿ ಎಷ್ಟು ಜಿಲ್ಲೆಗಳನ್ನು ಹಿಂದುಳಿದ ಜಿಲ್ಲೆಗಳೆಂದು ಪರಿಗಣಿಸಿದ್ದೀರಿ ?

ಶ್ರೀ ಜೆ.ಹೆಚ್. ಪಟೇಲ್.— ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಗೆ ಸಂಬಂಧಪಡದಿದ್ದರೂ ಕೂಡ ನಾನು ಮಾನ್ಯ ಸದಸ್ಯರಿಗೆ ಉತ್ತರವನ್ನು ಹೇಳುತ್ತೇನೆ. ನಮ್ಮ ರಾಜ್ಯದ ಬೀದರ್ ಜಿಲ್ಲೆಯನ್ನು ಅತ್ಯಂತ ಹಿಂದುಳಿದ ಕೈಗಾರಿಕಾ ಜಿಲ್ಲೆಯೆಂದು ಪರಿಗಣಿಸಿದ್ದೇವೆ. ಈ ಜಿಲ್ಲೆಗೆ ಹೆಚ್ಚಿನ ಪ್ರೋತ್ಸಾಹ ಕೊಡುತ್ತಿದ್ದೇವೆ.

## ಮೈಸೂರು ವೈರ್ ಮತ್ತು ಮೆಟಲ್ ಇಂಡಸ್ಟ್ರೀಸ್ ಸಂಸ್ಥೆಯಲ್ಲಿ ಕೆಲಸಗಾರರು ಮುಷ್ಕರ ಹೂಡಿರುವ ಬಗ್ಗೆ

(೪೨) ೩೭. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

(ಅ) ಮೈಸೂರು ವೈರ್ ಮತ್ತು ಮೆಟಲ್ ಇಂಡಸ್ಟ್ರೀಸ್, ತುಮಕೂರು ರಸ್ತೆ, ಬೆಂಗಳೂರು ಈ ಸಂಸ್ಥೆಯಲ್ಲಿ ಕಳೆದ ಐದುವರೆ ತಿಂಗಳಿನಿಂದ ಕೆಲಸಗಾರರು ಮುಷ್ಕರದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

(ಆ) ಹಾಗಿದ್ದರೆ ಅದಕ್ಕೆ ಕಾರಣಗಳೇನು ಮತ್ತು ಅದು ಮುಂದುವರಿಯುತ್ತಿದೆಯೆ ;

(ಈ) ಈ ಪರಿಸ್ಥಿತಿಯನ್ನು ಸಾಮಾನ್ಯ ಸ್ಥಿತಿಗೆ ತರಲು ಮತ್ತು ವಿವಾದವನ್ನು ಪರಿಹರಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಡಿ. ಮಂಜುನಾಥ (ಮಾನ್ಯ ಸಮಾಜಕಲ್ಯಾಣ ಮತ್ತು ಕಾರ್ಮಿಕ ಇಲಾಖೆಯ ಮಂತ್ರಿಗಳು), —

(ಅ) ಹೌದು.

(ಆ) ಕೆಲಸಗಾರರ ಬೇಡಿಕೆಗಳು ತೀರ್ಮಾನವಾಗಿಲ್ಲ ಎಂಬ ಕಾರಣದಿಂದ ಮುಷ್ಕರ ವರ್ತಿಸುತ್ತಿದ್ದಾರೆ. ಮುಷ್ಕರ ಮುಂದುವರಿಯುತ್ತಿದೆ.

(ಇ) ವಿವಾದಾಂಶಗಳನ್ನು ನ್ಯಾಯ ಪಂಚಾಯಿತಿಗೆ ದಿನಾಂಕ ೨೯ನೇ ಸೆಪ್ಟೆಂಬರ್ ೧೯೮೪ರಂದು ಸರ್ಕಾರವು ಒಪ್ಪಿಸಿದೆ. ಕೆಲಸಗಾರರು ನ್ಯಾಯ ಪಂಚಾಯಿತಿಗೆ ಒಪ್ಪಿಸಬೇಕಾಗಿರುವ ವಿಷಯಾಂಶಗಳ ಮೇಲೆ ಮುಷ್ಕರವನ್ನು ಮುಂದುವರಿಸಲಾಗುತ್ತಿದೆ ಎಂದು ತಿಳಿಯಪಡಿಸಿ ರಾಜ್ಯದ ಹೈಕೋರ್ಟಿನಿಂದ ಸಹ ಈ ಬಗ್ಗೆ ಒಂದು ಅಭಿಪ್ರಾಯವನ್ನು ಪಡೆದು ಮುಷ್ಕರವನ್ನು ಮುಂದುವರಿಸುತ್ತಿದ್ದಾರೆ. ಸರ್ಕಾರವು ಈ ವಿವಾದವನ್ನು ಅನೇಕ ಸಾರಿ ಸಭೆ ಸೇರಿ ಬಗೆಹರಿಸಲು ಪ್ರಯತ್ನಿಸಿದೆ, ೨೬-೩-೧೯೮೫ರಂದು ಸಹ ಈ ಬಗ್ಗೆ ಸಭೆ ನಡೆದಿದೆ.

ಶ್ರೀ ಎಂ. ಎಸ್. ಕೃಷ್ಣನ್. —ಮಾನ್ಯ ಅಧ್ಯಕ್ಷರೇ, ಸರ್ಕಾರ ದಿನಾಂಕ ೨೯-೯-೧೯೮೪ರಂದು ನ್ಯಾಯ ಪಂಚಾಯಿಗೆ ಒಪ್ಪಿಸಿದ್ದೆವು ಎಂದು ಹೇಳುವುದು ಸರಿಯಲ್ಲ, ಆ ರೀತಿ ಮಾಡಬಾರದು ಎಂದು ಹೈಕೋರ್ಟ್ ತೀರ್ಮಾನ ಮಾಡಿದೆ.

ಶ್ರೀ ಡಿ. ಮಂಜುನಾಥ್.—ಈಗ ಅಲ್ಲಿ ಮುಷ್ಕರ ನಡೆಸುತ್ತಿರುವುದು ಬೇರೆ ವಿವಾದಕ್ಕೆ.

ಶ್ರೀ ಎಂ. ಎಸ್. ಕೃಷ್ಣನ್.—ಒಂದು ಸಾರಿ ಹೈಕೋರ್ಟ್ ನಿಷೇಧ ಮಾಡಿದ ಮೇಲೆ ಅದು ಕಾನೂನು ಬಾಹಿರವಾಗುವುದಿಲ್ಲವೇ ?

ಶ್ರೀ ಡಿ. ಮಂಜುನಾಥ್.—ಈಗ ಅವರು ಮುಷ್ಕರ ಮಾಡುತ್ತಿರುವ ವಿಷಯವೇ ಬೇರೆ. ಹೈಕೋರ್ಟ್ ನಿಷೇಧ ಮಾಡಿದ ಆಜ್ಞೆಯೇ ಬೇರೆ.